ಕರ್ನಾಟಕ ಸರ್ಕಾರ
(ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ)
ಜಿಲ್ಲಾಧಿಕಾರಿಗಳ ಕಾರ್ಯಾಲಯ ಬೆಳಗಾವಿ ಜಿಲ್ಲೆ ಬೆಳಗಾವಿ.

## ಪತ್ರಿಕಾ ಪ್ರಕಟಣೆ

ಸಂ:ಬಿಸಿಡಬ್ಲ್ಯೂ/ಸಿಆರ್-158/2016-17 ದಿನಾಂಕ:27.06.2017

ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಅಧೀನದಲ್ಲಿ ಕಾರ್ಯನಿರ್ವಹಿಸುತ್ತಿರುವ ವಿದ್ಯಾರ್ಥಿನಿಲಯಗಳಲ್ಲಿ ಖಾಲಿ ಇರುವ ಅಡುಗೆಯವರು-80 ಮತ್ತು ಅಡುಗೆ ಸಹಾಯಕರು-92 ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಭರ್ತಿ ಮಾಡಲು ಈ ಕಛೇರಿ ಸಂ:ಬಿಸಿಡಬ್ಲ್ಯೂ/ಸಿಆರ್-158/2016-17 ದಿನಾಂಕ:19.10.2016 ರ ಅಧಿಸೂಚನೆಯಲ್ಲಿ ಅರ್ಹ ಅಭ್ಯರ್ಥಿಗಳಿಂದ ಆನ್‌ಲೈನ್ ಮೂಲಕ ಅರ್ಜಿಗಳನ್ನು ಆಹ್ವಾನಿಸಿ, ಕೊನೆಯ ದಿನಾಂಕ:30-11-2016 ರ ವರೆಗೆ ಅರ್ಜಿಗಳನ್ನು ಸ್ವೀಕರಿಸಲಾಗಿರುತ್ತದೆ. ಅದರಂತೆ ದಿನಾಂಕ:22/06/2017 ಹಾಗೂ ದಿನಾಂಕ:23/06/2017ರಂದು ಅಭ್ಯರ್ಥಿಗಳ ದಾಖಲಾತಿ ಪರಿಶೀಲನೆ ನಡೆಸಲಾಗಿರುತ್ತದೆ. ಸದರಿ ದಾಖಲಾತಿ ಪರಿಶೀಲನೆಯಲ್ಲಿ ಅರ್ಹರಾದ 1:3 ರಂತೆ ಅಭ್ಯರ್ಥಿಗಳ ಪಟ್ಟಿಯನ್ನು ಜಿಲ್ಲಾ ಅಧಿಕೃತ ವೆಬ್‌ಸೈಟ್‌ನ http/www.belgaum.nic.in/kannada/recruitment_New.html ನಲ್ಲಿ ಪ್ರಕಟಿಸಲಾಗಿದೆ. ಮುಂದುವರೆದು ಅಡುಗೆ ತಯಾರಿಕಾ ಪ್ರಾಯೋಗಿಕ ಪರೀಕ್ಷೆಗಾಗಿ ಅಭ್ಯರ್ಥಿಗಳನ್ನು 28-06-2017 ಹಾಗೂ 29-06-2017 ರಂದು ಆಹ್ವಾನಿಸಲಾಗಿತ್ತು ಆದರೆ ಆಡಳಿತಾತ್ಮಕ ತೊಂದರೆಯಿಂದ ಮುಂದೂಡಿ ಈ ಕೆಳಗಿನಂತೆ ಮರು ನಿಗಧಿಪಡಿಸಲಾಗಿದೆ.

| ಹುದ್ದೆಗಳ ವಿವರ | ಅಡುಗೆ ತಯಾರಿಕೆ ಪ್ರಾಯೋಗಿಕ ಪರೀಕ್ಷೆ | | |
|---|---|---|---|
| | ಸ್ಥಳ | ದಿನಾಂಕ | ಸ್ಥಳ |
| ಅಡುಗೆಯವರು | 03-07-2017 | ಬೆಳಿಗ್ಗೆ-9.30 ರಿಂದ ಸಂಜೆ 6-00 ರ ವರೆಗೆ | ಡಿ.ದೇವರಾಜ ಅರಸು ಮೆಟ್ರಿಕ್ ನಂತರದ ಬಾಲಕಿಯರ ವಸತಿ ನಿಲಯ ಅಜಂ ನಗರ, ರಾಯಲ್ ಐ.ಟಿ.ಐ ಪಕ್ಕದಲ್ಲಿ, ಬಾಕ್ಸೈಡ್ ರೋಡ್, ಬೆಳಗಾವಿ ನಗರ ಬೆಳಗಾವಿ |
| ಅಡುಗೆ ಸಹಾಯಕರು | 04-07-2017 | ಬೆಳಿಗ್ಗೆ-9.30 ರಿಂದ ಸಂಜೆ 6-00 ರ ವರೆಗೆ | |

ಆದ್ದರಿಂದ ಅರ್ಹ ಅಭ್ಯರ್ಥಿಗಳು ಕರೆ ಪತ್ರವನ್ನು ಅಧಿಕೃತ ವೆಬ್‌ಸೈಟ್ http/www.belgaum.nic.in/kannada/recruitment_New.html ನಲ್ಲಿ ಡೌನಲೋಡ್ ಮಾಡಿಕೊಂಡು ಮೇಲ್ಕಾಣಿಸಿದ ವೇಳಾ ಪಟ್ಟಿಯಂತೆ ಅಡುಗೆ ತಯಾರಿಕೆ ಪ್ರಾಯೋಗಿಕ ಪರೀಕ್ಷೆಗೆ ಹಾಜರಾಗಲು ಕೋರಲಾಗಿದೆ.

27/6

ಅಪರ ಜಿಲ್ಲಾಧಿಕಾರಿಗಳು
ಬೆಳಗಾವಿ